**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 1006/2021**

**ಸಿಡಬ್ಲು ಃ 4**

**ಪಿಡಬ್ಲು ಃ 2**

**ಹೆಸರು** ಃ ಇಮ್ರಾನ ಮುಸ್ತಾಕ ಐನಾಪೂರೆ

**ವಯಾ** ಃ 32 ವರ್ಷ

**ಉದ್ಯೋಗ** ಃ ವ್ಯಾಪಾರ

**ವಾಸ** ಃ ಯಮಕನಮರಡಿ ತಾಃ ಹುಕ್ಕೇರಿ

**(ದಿನಾಂಕಃ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

**1.** ಸುಮಾರು 3 ವರ್ಷಗಳ ಹಿಂದೆ ನಾನು ಪೋಲಿಸರಿಗೆ ಕಾಯಿಪಲ್ಲೆ ಕೊಡಲು ಪೋಲಿಸ ಠಣಗೆ ಹೊಗಿದ್ದೆ. ನನ್ನದು ಕಾಯಿಪಲ್ಲೆ ಅಂಗಡಿ ಇದ್ದು ನಾನು ಕಾಯಿಪಲ್ಲೆ ವ್ಯಾಪಾರ ಮಾಡುತ್ತೇನೆ. ಆ ಸಮಯದಲ್ಲಿ ಪೋಲಿಸರು ಒಂದು ಗಾಡಿ ಬಿಡುವುದು ಇದೆ ಎಂದು ಫೋಟೊ ತೆಗೆಸಿಕೊಂಡರು . ಸದರಿ ಗಾಡಿಯ ಎಡಗಡೆ ಗ್ಲಾಸು ಮತ್ತು ಹಿಂದುಗಡೆಯ ಗ್ಲಾಸಗಳು ಒಡೆದಿದ್ದರು. ಸದರಿ ಗಾಡಿ ಬಿಳಿ ಬಣ್ಣದ ಟಾಟಾ ಸುಮೊ ಆಗಿದ್ದು ಅದರ ನಂ. ಕೆಎ22 ಜಿ–0880 ಆಗಿತ್ತು . ಸದರಿ ಗಾಡಿಗೆ ಅಲ್ಲಲ್ಲಿ ಕಲು ಬಿದ್ದು ಸ್ಕ್ರ್ಯಾಚ್ ಆದಂತಹ ಮಾರ್ಕಗಳು ಇದ್ದವು. ನನ್ನ ಜೊತೆಗೆ ಅಜರುದ್ದೀನ ಮುಜಾವರ ಇದ್ದರು. ಅಲ್ಲಿ ಪೋಲಿಸರು ಮತ್ತು ತ್ರಿವಿಕ್ರಮ ಎಂಬುವವರೂ ಸಹ ಇದ್ದರು.

**2.** ಅಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-5 ಇವರನ್ನು ಪಂಚನಾಮೆ ಮಾಡಲು ಕರೆಸಿದ್ದರು . ನಾವು ಪಂಚರಾಗಿ ಹಾಜರ ಇದ್ದು ಅಲ್ಲಿ ಆದ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಹಾಕಿರುತ್ತೇವೆ. ಅಲ್ಲಿ ನಮ್ಮ ಫೋಟೊ ಮತ್ತು ಪಂಚನಾಮೆಯನ್ನು ಮಾಡಿದರು. ಸದರಿ ಪಂಚನಾಮೆ ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೊ

ನೋಡುತ್ತಿದ್ದು ಸಾಕ್ಷಿ ತನ್ನ ಇರುವಿಕೆಯನ್ನು ಗುರುತಿಸಿದ್ದು ಅದನ್ನು ನಿ.ಪಿ-5 ಮತ್ತು 6 ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

**3.** ಆ ದಿನ ದಿನಾಂಕ **11-6-2021** ಆಗಿತ್ತು ಎಂದರೆ ನಿಜ. ಸದರಿ ಟಾಟಾ ಸುಮೊ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರಿಗೆ ಸೇರಿದ್ದು ಅದನ್ನು **10-6-2021** ರಂದು ಹಿಡಕಲ ಡ್ಯಾಂ ಹಿನ್ನೀರಿನ ಪ್ರದೇಶದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ತಡೆಗಟ್ಟುವ ಕುರಿತು ಗಸ್ತು ಮಾಡುತ್ತಿರುವಾಗ ಸದರಿ ಗಾಡಿಗೆ ಕಲ್ಲುಗಳನ್ನು ಒಗೆದು ಜಖಂ ಮಾಡಿದ್ದರು ಎನ್ನುವ ವಿಚಾರವನ್ನು ಪೋಲಿಸರು ನನಗೆ ಹೇಳಿದರು ಎಂದರೆ ನಿಜ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಆರ್ ಬಿ ಸಿ ವಕೀಲರಿಂದ -

**4.** ನಾನು ಪೋಲಿಸರಿಗೆ ಸುಮಾರು **8** ವರ್ಷಗಳಿಂದ ಪ್ರತಿದಿನ ಮಧ್ಯಾಹ್ನ ಕಾಯಿಪಲ್ಲೆಗಳನ್ನು ತೆಗೆದುಕೊಂಡು ಕೊಡಲು ಹೋಗುತ್ತೇನೆ. ಸದರಿ ಗಾಡಿ ಮೇಲೆ ಕರ್ನಾಟಕ ಸರ್ಕಾರ ಎಂದು ಬೋರ್ಡ ಇರಲಿಲ್ಲ. ಸದರಿ ವಾಹನಕ್ಕೆ ಗ್ಲಾಸ ಹೇಗೆ ಒಡೆದಿತ್ತು ಹಾಗೂ ಸ್ಕ್ರಾಚ್ ಹೇಗೆ ಆಗಿತ್ತು ಎಂದು ನಾನು ಕಣ್ಣಾರೆ ನೋಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ನಾನು ಸಹಿ ಮಾಡಿದೆ , ನನಗೆ ಬೇರೆ ವಿಚಾರ ಗೊತ್ತಿಲ್ಲ, ಯಾವ ಉದ್ದೇಶಕ್ಕಾಗಿ ಹಾಗೂ ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೊವನ್ನು ಯಾರು ತೆಗೆದರು ಮತ್ತು ಎಲ್ಲಿ ತೆಗೆದರು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ.

**5.** ಕಾಯಿಪಲ್ಲೆ ವ್ಯಾಪಾರ ಮಾಡುವ ಬಗ್ಗೆ ನನಗೆ ಪಂಚಾಯತಿಯಿಂದ ರಸೀದಿ ಕೊಟ್ಟಿರುತ್ತಾರೆ, ನಾನು ಅದನ್ನು ಪೋಲಿಸರಿಗೆ ಕೊಟ್ಟಿಲ್ಲ. ನನಗೆ ಯಮಕನಮರಡಿ ಪೋಲಿಸರ ಪರಿಚಯ ಇದೆ. ಅವರ ಕೋರಿಕೆ ಮೇರೆಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**